3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಜಮಾಬಂದಿ ನಡೆಸಲು ದಿನಾಂಕ:26/12/17ಕ್ಕೆ ದಿನಾಂಕ ನಿಗದಿಪಡಿಸಿ, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದೆ. ಅದರನ್ವಯ ಬೈರಗಾನಹಳ್ಳಿ ಗ್ರಾಮ ಪಂಚಾಯತ್‌ನಲ್ಲಿ ಜಮಾಬಂದಿ ನಡೆದಿರುವ ಬಗ್ಗೆ ವರದಿ ಬಂದ ತಕ್ಷಣ ಈ ಕಛೇರಿಗೆ ವರದಿಯನ್ನು ಸಲ್ಲಿಸಲಾಗುವುದೆಂದು ಹೇಳಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ 14 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹುದ್ದೆ ಖಾಲಿ ಇರುವ ಕಾರಣ, ಕಾರ್ಯ ಒತ್ತಡ ಹೆಚ್ಚಾಗಿರುವುದರಿಂದ ಮತ್ತು 2017–18ನೇ ಸಾಲಿನಲ್ಲಿ ಶ್ರೀನಿವಾಸಪುರ ತಾಲ್ಲೂಕನ್ನು ಸರ್ಕಾರವು ವಸತಿ ಯೋಜನೆಯಲ್ಲಿ ಪೈಲಟ್ ಪ್ರಾಜೆಕ್ಟಾಗಿ ಪರಿಗಣಿಸಿ, ಸುಮಾರು 18000 ಮನೆಗಳನ್ನು ಮಂಜೂರು ಮಾಡಿರುವ ಕಾರಣ ಹಾಗೂ ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ತಾಲ್ಲೂಕನ್ನಾಗಿ ಘೋಷಣೆ ಮಾಡಿರುವ ಕಾರಣ, ಗ್ರಾಮ ಪಂಚಾಯತ್ ಸಿಬ್ಬಂದಿಗಳಿಗೆ ಹೆಚ್ಚಿನ ಕೆಲಸ ನಿರ್ವಹಿಸಿರುವುದರಿಂದ, ಜಮಾಬಂದಿ ಕಾರ್ಯವನ್ನು ಕಾಲಮಿತಿಯಲ್ಲಿ ಮಾಡಲು ವಿಳಂಬವಾಗಿದೆಯೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:16/08/2016 ರಿಂದ 30/11/2016ರ ಅವಧಿಯಲ್ಲಿ ಚಲ್ದಿಗಾನ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಎಂದು ಹೇಳುತ್ತಾ ಉಳಿದಂತೆ 1ನೇ ಎದುರುದಾರರ ಆಕ್ಷೇಪಣೆಯ ಅಂಶವನ್ನು ಪುನರುಚ್ಛರಿಸಿದ್ದಾರೆ.

5. ದೂರಿನ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ರವರಿಂದ ವರದಿಯನ್ನು ಕೇಳಲಾಗಿ, ಸದರಿಯವರು 2015–16ನೇ ಸಾಲಿನ ಜಮಾಬಂದಿ ವರದಿ ಹಾಗೂ 2015–16 ರಿಂದ 2017–18ನೇ ಸಾಲಿನ ಜಮಾಬಂದಿ ಕಾರ್ಯಕ್ರಮವನ್ನು ದಿನಾಂಕ:06/10/2018ಕ್ಕೆ ನಿಗಧಿಪಡಿಸಿದ ಆಹ್ವಾನ ಪತ್ರದ ಪ್ರತಿಯನ್ನು ಸಲ್ಲಿಸಿದ್ದಾರೆ.

6. 2015–16 ರಿಂದ 15/09/2018 ರವರೆಗೆ ಕರ್ತವ್ಯ ನಿರ್ವಹಿಸಿದ ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾಗಿದ್ದ 1) ಶ್ರೀ.ಎಸ್.ಶಿವಶಂಕರಯ್ಯ, 2) ಶ್ರೀ.ಟಿ.ಎಂ.ಲಕ್ಷ್ಮಿಮೋಹನ್, 3)ಶ್ರೀ.ಆರ್.ರವಿಚಂದ್ರ ಹಾಗೂ ಚಲ್ದಿಗಾನಹಳ್ಳಿ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳಾಗಿದ್ದ

4)ಶ್ರೀ.ಆರ್.ಮಂಜುನಾಥ ಪ್ರಸಾದ್, 5) ಶ್ರೀ.ಎನ್.ರಾಮಪ್ಪ, 6) ಶ್ರೀ.ಎನ್.ಕೋದಂಡರಾಮ, 7) ಶ್ರೀ.ರಮೇಶ್‌ಬಾಬು ಮತ್ತು 8) ಶ್ರೀ.ಕೆ.ಜಗದೀಶ್ ಕುಮಾರ್ ರವರುಗಳನ್ನು ಕ್ರಮವಾಗಿ, 3 ರಿಂದ 10ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಯಿತು.

7. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿ:02/10/14 ರಿಂದ 03/10/15 ರವರೆಗೆ ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಿದ್ದು, 2015–16ನೇ ಸಾಲಿನ ಜಮಾಬಂದಿ ನಡೆಸುವ ಅವಧಿಗೆ ಮುನ್ನ ತಾವು ದಿ:01/08/16ಕ್ಕೆ ಕಾರ್ಯನಿರ್ವಾಹಕ ಅಧಿಕಾರಿ ಕರ್ತವ್ಯದಿಂದ ಬಿಡುಗಡೆ ಹೊಂದಿರುವುದಾಗಿ ಹೇಳಿದ್ದಾರೆ.

8. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ದಿ:16/08/16 ರಿಂದ 30/11/16ರ ಅವಧಿಯಲ್ಲಿ ತಾವು ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್‌ನಲ್ಲಿ ಕರ್ತವ್ಯ ನಿರ್ವಹಿಸಿಲ್ಲವೆಂದು ಹೇಳಿದ್ದಾರೆ.

9. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ದೂರಿನಲ್ಲಿ ತಮ್ಮ ಹೆಸರು ನಮೂದಾಗಿಲ್ಲ ಮತ್ತು ದೂರುದಾರರು ತಮ್ಮ ಮೇಲೆ ಯಾವುದೇ ಆರೋಪ ಮಾಡಿಲ್ಲವೆಂದು ಹೇಳುತ್ತಾ, ನೋಟೀಸಿನಲ್ಲಿರುವ ತಮ್ಮ ಹೆಸರನ್ನು ರದ್ದುಪಡಿಸಬೇಕೆಂದು ಕೋರಿದ್ದಾರೆ.

10. ಆರನೇ (6ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿ:03/05/14 ರಿಂದ 04/04/15 ರವರೆಗೆ ಚಲ್ದಿಗಾನಹಳ್ಳಿ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುವುದಾಗಿ ಹೇಳಿ, ದೂರುದಾರರು ಕೋರಿರುವ ಮಾಹಿತಿಯನ್ನು ಅವರಿಗೆ ನೀಡಿರುವುದಾಗಿ ಹೇಳಿದ್ದಾರೆ.

11. ಏಳನೇ (7ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ತಾವು ದಿ:04/04/15 ರಿಂದ 08/06/16 ರವರೆಗೆ ಚಲ್ದಿಗಾನಹಳ್ಳಿ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುವುದಾಗಿ ಹೇಳಿ, ದೂರುದಾರರು ಕೋರಿರುವ ಮಾಹಿತಿಯನ್ನು ಅವರಿಗೆ ನೀಡಿರುವುದಾಗಿ ಹೇಳಿದ್ದಾರೆ.

12. ಎಂಟನೇ (8ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

v) ಜಮಾಬಂದಿ ವರದಿಯ ಮುಖ್ಯಾಂಶಗಳನ್ನು ಜಿಲ್ಲಾ ವಾರ ಪತ್ರಿಕೆಗಳಲ್ಲಿ ಪ್ರಕಟಿಸಿದ ಬಗ್ಗೆ ದಾಖಲೆಗಳಿಲ್ಲ;

vi) ಪಂಚಾಯತ್ ಜಮಾಬಂದಿ ವರದಿಯನ್ನು ಕಾರ್ಯನಿರ್ವಾಹಕ ಅಧಿಕಾರಿಯು ಕರೆದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಭೆಯಲ್ಲಿ ಪರಿಶೀಲಿಸಿದ ದಾಖಲೆಗಳಿಲ್ಲ;

vii) ಜಮಾಬಂದಿ ನಡೆಸಿದ ದಿನಾಂಕ ಮತ್ತು ವಿವರಗಳನ್ನು ಪಂಚತಂತ್ರದಲ್ಲಿ ಅಳವಡಿಸಿದ ದಾಖಲೆಗಳಿಲ್ಲ.

7) ಒಂದನೇ ಎದುರುದಾರರು ದಿನಾಂಕ:09/11/16 ರಿಂದ 03/06/19 ರವರೆಗೆ; 3ನೇ ಎದುರುದಾರರು ದಿ:02/10/14 ರಿಂದ 03/10/15; 4ನೇ ಎದುರುದಾರರು ದಿ:28/09/15 ರಿಂದ 05/08/16 ರವರೆಗೆ ಮತ್ತು 5ನೇ ಎದುರುದಾರರು ದಿ:12/08/16 ರಿಂದ 09/11/16 ರವರೆಗೆ ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ.

8) ಎರಡನೇ ಎದುರುದಾರರು ದಿ:02/01/17 ರಿಂದ 05/12/2017 ರವರೆಗೆ; 6ನೇ ಎದುರುದಾರರು ದಿ:01/01/15 ರಿಂದ 28/04/15 ರವರೆಗೆ; 7ನೇ ಎದುರುದಾರರು ದಿ:20/09/15 ರಿಂದ 07/06/16 ರವರೆಗೆ; 8ನೇ ಎದುರುದಾರರು ದಿ:08/06/16 ರಿಂದ 27/12/16 ರವರೆಗೆ; 9ನೇ ಎದುರುದಾರರು ದಿ:06/12/17 ರಿಂದ 11/03/18 ರವರೆಗೆ; ಮತ್ತು 10ನೇ ಎದುರುದಾರರು ದಿ:12/03/18 ರಿಂದ ಈವರೆಗೆ ಚಲ್ದಿಗಾನಹಳ್ಳಿ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ \ ನಿರ್ವಹಿಸುತ್ತಿದ್ದಾರೆ.

9) ಒಂದು (1), 2, 5, 8 ಮತ್ತು 10ನೇ ಎದುರುದಾರರುಗಳು ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ರಾಜ್ ಜಮಾಬಂದಿ ನಿರ್ವಹಣೆ) ನಿಯಮಗಳು, 2004 ಮತ್ತು ಸುತ್ತೋಲೆಯಲ್ಲಿನ ಅಂಶಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬಂದಿದೆ.

16. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1, 2, 5, 8 ಮತ್ತು 10ನೇ ಎದುರುದಾರರು (ಶ್ರೀ.ವಿ.ನಾರಾಯಣಸ್ವಾಮಿ [ಪ್ರಸ್ತುತ ನಿವೃತ್ತ], ಕಾರ್ಯನಿರ್ವಾಹಕ ಅಧಿಕಾರಿ; ಶ್ರೀ.ಎಂ.ಸೋಮಶೇಖರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ; ಶ್ರೀ.ಆರ್.ರವಿಚಂದ್ರ, ಕಾರ್ಯನಿರ್ವಾಹಕ ಅಧಿಕಾರಿ; ಶ್ರೀ.ಎನ್.ಕೋದಂಡರಾಮ, ಪಂಚಾಯತ್ ಅಭಿವೃದ್ಧಿ ಅಧಿಕಾರಿ [ಪ್ರಭಾರ]; ಮತ್ತು ಶ್ರೀ.ಕೆ.ಜಗದೀಶ್‌ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ) ಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

17. ಮೂರು (3), 4, 6, 7 ಮತ್ತು 9ನೇ ಎದುರುದಾರರುಗಳ ಕಾರ್ಯಾವಧಿಯಲ್ಲಿ ಲೋಪ ನಡೆಯದಿರುವುದರಿಂದ, ಸದರಿಯವರುಗಳ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

